


ಇನ್ನೂ ಸೂರ್ಯೋದಯವಾಗಿಲ್ಲ. ಶರಣರು ಸತ್ಸಂಗಕ್ಕಾಗಿ ಮಹಾಮನೆಯತ್ತ ನಡೆದಿದ್ದಾರೆ. ಬಸವಣ್ಣನವರಿಗೆ ಶರಣು ಹೇಳಿ ತಮ್ಮ ತಮ್ಮ ಆಸನಗಳಲ್ಲಿ ಕುಳಿತುಕೊಳ್ಳುತ್ತಾರೆ.

**ಸೊಡ್ಡಳ ಬಾಚರಸ :**

ಹಾಲ ತೊರೆಗೆ ಬೆಲ್ಲದ ಕೆಸರು ಸಕ್ಕರೆಯ ಮಳಲು
ತವರಾಜದ ನೊರೆ ತೆರೆಯಂತೆ ಆದ್ಯರ ವಚನವಿರಲು,
ಬೇರೆ ಬಾವಿಯ ತೋಡಿ, ಉಪ್ಪನೀರನುಂಬುವನ ವಿಧಿಯಂತೆ
ಆಯಿತ್ತೆನ್ನ ಮತಿ, ಕೂಡಲಸಂಗಮದೇವಾ. ॥ 290 ॥

ಈ ವಚನದ ಬೆಡಗಿನ ರಹಸ್ಯವನ್ನು ಶರಣರಿಗೆ ತಿಳಿಯುವಂತೆ ವಿವರಿಸಿ ಬಸವರಸ.

**ಬಸವಣ್ಣ :** ತನುವಿನಲ್ಲಿರುವ ಅರಿವಿನ ಅಮೃತ ಪಾನ ಮಾಡಲು ಮನಕ್ಕೆ ಬಯಕೆಯಾಗಬೇಕು. ಅದು ಅರಿವಿನಗಳಿಕೆಗೆ ಅತ್ತ ಇತ್ತ ಸುಳಿಯಬೇಕಿಲ್ಲ. ಆದ್ಯರ ವಚನ ಹಾಲ ತೊರೆಯಂತೆ ತನುವಿನ ಮುಂದೆಯೇ ಸುಳಿಯುತ್ತದೆ. ಬೆಲ್ಲದ ಕೆಸರು, ಸಕ್ಕರೆಯ ಮಳಲು ತವರಾಜ ಬೆರೆತ ನೊರೆಯುಕ್ತ ಹಾಲು ಮನವನ್ನು ಅಮೃತಾತ್ಮನತ್ತ ಕೊಂಡೊಯ್ಯುತ್ತದೆ. ಇದಕ್ಕೆ ಮತ್ತಾರ ಅವಶ್ಯಕತೆಯೂ ಇಲ್ಲ.

ಮನ, ಆದ್ಯರ ವಚನ ಕೇಳಿ ಅರಿವಿನ ಹಾಲ ತೊರೆಗೆ ಜಿಗಿದರೆ ಸಾಕು ; ಅರಿವೆಂಬ ಗುರುದೇವ ಎತ್ತಿಕೊಂಡು ತನ್ನಂತೆ ಮಾಡಿಕೊಳ್ಳುತ್ತಾನೆ. ಆದ್ಯರ ವಚನವೆಂಬ ಹಾಲತೊರೆಯ ಬಿಟ್ಟು ಬೇರೆ ಬಾವಿಯ ತೋಡಿ ದಣಿಯುವ ಮಂದ ಮತಿ ಮನಕ್ಕೆ ಉಪ್ಪು ನೀರೆ ಗತಿ ಕೂಡಲಸಂಗಮದೇವಾ.

ಆದ್ಯರ ವಚನ ಪರುಷ ಕಂಡಣ್ಣಾ ; ಸದಾಶಿವನೆಂಬ ಲಿಂಗವ ನಂಬುವುದು ; ನಂಬಲೊಡನೆ ನೀ ವಿಜಯಕಂಡಣ್ಣಾ. ಅಧರಕ್ಕೆ ಕಹಿ ಉದರಕ್ಕೆ ಸಿಹಿ ಕೂಡಲಸಂಗನ ಶರಣರ ವಚನ ಬೇವ ಸವಿದಂತೆ.

ಮನವೆಂಬ ಕಸ ಬೆರೆತ ತನುವನ್ನು ಶುದ್ಧೀಕರಿಸಿ ಚೊಕ್ಕ ಚಿನ್ನದಂತೆ ಮಾಡುತ್ತದೆ ಪರುಷ ! ಪರುಷ ತಾಕಿದ ಲೋಹ ಚಿನ್ನವಾಗುತ್ತದೆ.

**ಎಲೆಗಾರ ಕಾಮಣ್ಣ :** ಧನ್ಯರಾದೆವು ಬಸವರಸ. ತಮಗೆ ಶರಣು ಶರಣಾರ್ಥಿ.

**ಬಸವಣ್ಣ :** ಇಂದಿಗೆ ಇಷ್ಟು ಸಾಕು. ಮತ್ತೆ ನಾಳೆ ಮುಂದುವರಿಸೋಣ ಎಂದು ಸಭೆಗೆ ಮಂಗಲ ಹಾಡಿದರು.

ಬಸವಣ್ಣನವರು ಉಣಬಡಿಸಿದ ಬ್ರಹ್ಮರಸ ಪಾನಮಾಡಿ ಅರಿವಿನ ಮತ್ತಿನಲ್ಲಿ ತೇಲಾಡುತ್ತಾ ಶರಣರು ತಮ್ಮ ತಮ್ಮ ಮನೆಗೆ ಮರಳಿದರು.

# ಶ್ರದ್ಧೆಯಿಂದ ಕೆಲಸ ಮಾಡಿ, ಉತ್ತಮ ಭವಿಷ್ಯ ರೂಪಿಸಿಕೊಳ್ಳಿ : ಡಿಸಿ

• **ಸುದ್ದಿಮೂಲ ವಾರ್ತೆ** ಬಳ್ಳಾರಿ, ಮೇ.24:

**ನಿಷ್ಠೆ, ಶ್ರದ್ಧೆ ಮತ್ತು ಪಾಲ್ಗೊಳ್ಳುವಿಕೆಯಿಂದ ತಾವು ಕೆಲಸ ಮಾಡಿದಲ್ಲಿ ಉತ್ತಮ ಭವಿಷ್ಯ ರೂಪುಗೊಳ್ಳಲಿದೆ ಎಂದು ಜಿಲ್ಲಾಧಿಕಾರಿ ಪ್ರಶಾಂತ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.**



ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ, ಬಳ್ಳಾರಿ ಚೇಂಬರ್ ಕೌಶಲ್ಯಾಭಿವೃದ್ಧಿ ಕೇಂದ್ರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಖನಿಜ ನಿಧಿಯ ಜಂಟಿ ಆಶ್ರಯದಲ್ಲಿ ಹೋಟಲ್ ಮೇನೇಜ್ಮೆಂಟ್ ಕೋರ್ಸ್‌ನ ಕೌಶಲ್ಯಪೂರ್ಣ ತರಬೇತಿ ಪಡೆದಿರುವ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ವಿತರಣಾ ಸಮಾರಂಭ ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

ಹೋಟೆಲ್ ಮೇನೇಜ್ಮೆಂಟ್ ತರಬೇತಿ ಪಡೆದಿರುವ ಎಲ್ಲರೂ ಉದ್ಯೋಗ ಸೃಷ್ಟಿ ಮಾಡಿ ಅನೇಕರಿಗೆ ಉದ್ಯೋಗಗಳನ್ನು ನೀಡಬೇಕು. ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯು ಅತ್ಯಲ್ಪ ಅವಧಿಯಲ್ಲಿ ಉತ್ತಮ ತರಬೇತಿ ನೀಡಿರುವುದು ಶ್ಲಾಘನೀಯ - ಅಭಿನಂದನೀಯ ಎಂದರು.

ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ್ ಅವರು ಮುಖ್ಯ ಅತಿಥಿಗಳಾಗಿ, ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಹಿರಿಯ ಉಪಾಧ್ಯರು, ಚೇಂಬರ್ ಸ್ಕಿಲ್ ಡೆವಲಪ್ಮೆಂಟ್ ಸೆಂಟರ್‌ನ ಚೇರ್ಮನ್ ಆಗಿರುವ ಯಶವಂತರಾಜ್ ನಾಗಿರೆಡ್ಡಿ, ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಜಂಟಿ ಕಾರ್ಯದರ್ಶಿ ಡಾ. ಮರ್ಚೇಡ್ ಮಲ್ಲಿಕಾರ್ಜುನ ಗೌಡ, ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಗೌರವ ಅಧ್ಯಕ್ಷರಾಗಿರುವ ಸಿ. ಶ್ರೀನಿವಾಸರಾವ್, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಬಿ. ಸೋಮಶೇಖರ ಮತ್ತು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಪಿ.ಎಸ್. ಹಟ್ಟಪ್ಪ ಅವರು ಮುಖ್ಯ ಅತಿಥಿಗಳಾಗಿದ್ದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾದ ಬಿ. ಮಹಾರುದ್ರಗೌಡ ಅವರು ಸ್ವಾಗತಿಸಿದರು. ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಗೌರವ ಕಾರ್ಯದರ್ಶಿ ಕೆ.ಸಿ. ಸುರೇಶಬಾಬು ಅವರು ವಂದನಾರ್ಪಣೆ ಸಲ್ಲಿಸಿದರು.

**ಅಭಿನಂದನೆ :** ಜಿಲ್ಲಾಧಿಕಾರಿ ಪ್ರಶಾಂತ ಕುಮಾರ್ ಮಿಶ್ರಾ ಮತ್ತು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರು ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಿ - ಅಭಿನಂದಿಸಿ ಗೌರವಿಸಲಾಯಿತು.

## ಕೌಶಲ್ಯಾಧಾರಿತ ತರಬೇತಿಗೆ ಅರ್ಜಿ ಆಹ್ವಾನ

• **ಸುದ್ದಿಮೂಲ ವಾರ್ತೆ** ರಾಯಚೂರು, ಮೇ.24:
ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ ಹಾಗೂ ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್), ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಸ್ವಯಂ ಉದ್ಯಮ ಪ್ರಾರಂಭಿಸಲು ಆಸಕ್ತರಿರುವವರಿಗೆ ಉಚಿತವಾಗಿ ರಾಯಚೂರು ಜಿಲ್ಲೆಯಲ್ಲಿ ಮೇ,31 ರೊಳಗಾಗಿ ಮೋಬೈಲ್ ಸಂಖ್ಯೆ 8073684608, 9986332736ಗೆ ಕರೆ ಮಾಡಿ ಹೆಸರನ್ನು ನೋಂದಾಯಿಸಿಕೊಳ್ಳಬಹುದು ಎಂದು ರಾಯಚೂರು, ಸಿಡಾಕ್, ಜಂಟಿ ನಿರ್ದೇಶಕರಾದ ಜಿ. ಯು. ಹುಡೇದ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಾರ್ಟ್ ಸರ್ಕ್ಯೂಟ್ : ಕೋಟ್ಯಾಂತರ ರೂ ಔಷಧಿ ಬೆಂಕಿಗೆ ಆಹುತಿ

• **ಸುದ್ದಿಮೂಲ ವಾರ್ತೆ** ಕಲಬುರಗಿ, ಮೇ.24:



ಶಾರ್ಟ್ ಸರ್ಕ್ಯೂಟ್ ನಿಂದಾಗಿ ಮೆಡಿಕಲ್ ಅಂಗಡಿಯೊಂದಕ್ಕೆ ಬೆಂಕಿ ಹತ್ತಿದ್ದು, ಕೋಟ್ಯಾಂತರ ರೂಪಾಯಿ ಮೌಲ್ಯದ ಔಷಧಿಗಳು ಬೆಂಕಿಗಾಹುತಿಯಾಗಿರುವ ಘಟನೆ ನಗರದಲ್ಲಿ ನಡೆದಿದೆ.

ನಗರದ ಬ್ರಹ್ಮಪುರ ಬಡಾವಣೆಯ ಸುಭಾಷ ಚೌಕ್ ಬಳಿ ಇರುವ ಗುರುಸ್ವಾಮಿ ತಂದೆ ಬಸಯ್ಯಸ್ವಾಮಿ ಹಿರೇಮಠ್ ಎನ್ನುವವರ ಬಸವ ಮೆಡಿಕಲ್ ಅಂಡ್ ಜನರಲ್ ಸ್ಟೋರಗೆ ಶುಕ್ರವಾರ ತಡರಾತ್ರಿ ಶಾರ್ಟ್ ಸರ್ಕ್ಯೂಟ್ ನಿಂದಾಗಿ ಅಂದಾಜು 1.5 ಕೋಟಿ ರೂ ಮೌಲ್ಯದ ಔಷಧಿಗಳು ಸುಟ್ಟು ಕರಕಲಾಗಿದ್ದು, ಮೆಡಿಕಲ್ ಶಾಪ್ ಮಾಲೀಕರು ಕಂಗಾಲಾಗಿದ್ದಾರೆ.

ವಿಷಯ ತಿಳಿದ ಕೂಡಲೇ, ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಅಧಿಕಾರಿಗಳು ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆರ್.ಜೆ ನಗರ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ತನಿಖೆ ನಡೆಯುತ್ತಿದೆ.

## ನೀರು ಪೋಲು, ತಣ್ಣಗೆ ಕುಳಿತ ಅಧಿಕಾರಿಗಳು

• **ಸುದ್ದಿಮೂಲ ವಾರ್ತೆ** ಮಸ್ಕಿ, ಮೇ.24:
ನಗರದ ಹೃದಯ ಭಾಗದಲ್ಲಿ ಕುಡಿಯುವ ನೀರಿನ ಪೈಪ್ ಒಡೆದು ಆರು ತಿಂಗಳು ಆದರೂ ಸಹ ಯಾರೂ ಇತ್ತ ಗಮನ ಹರಿಸಿಲ್ಲ.

ಹೀಗಾಗಿ ನಿತ್ಯ ನೂರಾರು ಜನರು ಓಡಾಡುವ ರಸ್ತೆ ಬದಿಯಲ್ಲಿ ದೊಡ್ಡ ಪ್ರಮಾಣದಲ್ಲಿ ನೀರು ಪೋಲು ಆಗುತ್ತದೆ.

ನಗರದ ಹಳೇ ಬಸ್ ನಿಲ್ದಾಣ ಸಮೀಪದಲ್ಲಿರುವ ವಿಜಯಲಕ್ಷ್ಮಿ ಮೆಡಿಕಲ್ ಹತ್ತಿರ ಕುಡಿಯುವ ನೀರಿನ ಪೈಪ್ ಒಡೆದು ಆರು ತಿಂಗಳು ಗತಿಸಿದರೂ ಸಹ ನಗರಸಭೆ ಅಧಿಕಾರಿಗಳು ಈ ಕಡೆ ತಿರುಗಿ ನೋಡಿಲ್ಲ. ಸಾರ್ವಜನಿಕರು ವಿಧಿ ಇಲ್ಲದೇ ರಸ್ತೆಯಲ್ಲಿ ಓಡಾಡಬೇಕು. ಇದೇ ರೀತಿಯಲ್ಲಿ.ಈ ಭಾಗದಲ್ಲಿ ಪೈಪ್ ಒಡೆದು ಸಾಕಷ್ಟು ಪ್ರಮಾಣದ ಕುಡಿಯುವ ನೀರು ಚರಂಡಿ ಪಾಲು ಆಗುತ್ತದೆ. ಮೊದಲೇ ಬೇಸಿಗೆ ಸಮಯದಲ್ಲಿ ನೀರು ಬಂಗಾರ ಇದ್ದಂತೆ ಆದರೆ ಅಧಿಕಾರಿಗಳ ನಿರ್ಲಕ್ಷ್ಯ ದಿಂದ ಕುಡಿಯುವ ನೀರು ಚರಂಡಿ ಪಾಲು ಆಗಿದೆ.

6ನೇ ವಾರ್ಡಿನ ಬಡಾವಣೆಗೆ ಹೋಗುವ ಕುಡಿಯುವ ನೀರಿನ ಪೈಪ್ ಇಲ್ಲಿನ ವಿಜಯಲಕ್ಷ್ಮಿ ಮೆಡಿಕಲ್ ಸ್ಟೋರ್ ಮುಂಭಾಗದಲ್ಲಿ ಒಡೆದು ಹೋಗಿದೆ. ನೀರಿನ ರಭಸಕ್ಕೆ ಅಲ್ಲಿನ ಪ್ರದೇಶದಲ್ಲಿ ನೀರು ಸಂಗ್ರಹವಾಗಿದೆ. ನೀರಿನ ಮೇಲೆ ಸೊಳ್ಳೆ ಉತ್ಪತ್ತಿಯಾಗಿ ಸಾಂಕ್ರಾಮಿಕ ರೋಗ ಹರಡುವ ಲಕ್ಷ ಣಗಳು ಕಂಡು ಬರುತ್ತವೆ. ಕೂಡಲೇ ಇದಕ್ಕೆ ಸಂಬಂಧ ಪಟ್ಟ ಅಧಿಕಾರಿಗಳು ಕುಡಿಯುವ ನೀರಿನ ಪೈಪ್ ದುರಸ್ಥಿ ಮಾಡಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

**ಇಂಜಿನಿಯರ ಇದ್ದರೂ ಇಲ್ಲದಂತೆ :** ನಗರಸಭೆಯ ಕುಡಿಯುವ ನೀರು ನಿರ್ವಹಣೆ ಮಾಡಲು ಒಬ್ಬ ಇಂಜಿನಿಯರ್ ನೈರ್ಮಲ್ಯಾಧಿಕಾರಿ ಸೇರಿ ಹತ್ತು ಹಲವು ಪೌರಕಾರ್ಮಿಕರಿದ್ದರು ಒಡೆಯುತ್ತಿರುವ ಪೈಪ್ ಗಳ ದುರಸ್ತಿ ಕಾರ್ಯ ಮಾಡುತ್ತಿಲ್ಲ ಎಂಬ ಆರೋಪ ವ್ಯಾಪಕವಾಗಿದೆ.



ಜನ ಹನಿ ನೀರಿಗಾಗಿ ಪರದಾಡುತ್ತಿರುವಾಗ ಬೆಳಗ್ಗೆಯಿಂದ ಹೀಗೆ ಪೋಲಾದರೆ ಇದಕ್ಕೆ ಜವಾಬ್ದಾರಿ ಯಾರು ? ಇಲ್ಲಿಯ ಪುರಸಭೆ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ?
**– ಬಸನಗೌಡ 6ನೇ ವಾರ್ಡಿನ ನಿವಾಸಿ.**

ಪೈಪ್ ಒಡೆದ ಅಪಾರ ಪ್ರಮಾಣ ನೀರು ಪೋಲಾಗುತ್ತಿರುವ ಬಗ್ಗೆ ಪುರಸಭೆ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ, ಎಲ್ಲವಾರ್ಡುಗಳಲ್ಲಿ 08 ದಿನಕ್ಕೊಮ್ಮೆ ನೀರು ಪಡೆಯುವ ಸ್ಥಿತಿ ಎದುರಿಸುತ್ತಿರುವಾಗ ಅನಗತ್ಯ ಒಡೆದು ಪೋಲಾಗುತ್ತಿರುವ ನೀರಿನ ಪೈಪ್ ದುರಸ್ತಿ ಕಾಮಗಾರಿ ನಡೆಸದಿರುವುದು ಬೇಸರದ ಸಂಗತಿ ಎಂದರು.
**– ನಾಗರಾಜ 6ನೇ ವಾರ್ಡಿನ ನಿವಾಸಿ.**

## ಪರಿಷತ್ ಚುನಾವಣೆ ಗೆಲ್ಲುವೆ – ಪ್ರತಾಪ್ ರೆಡ್ಡಿ

• **ಸುದ್ದಿಮೂಲ ವಾರ್ತೆ** ಬಳ್ಳಾರಿ, ಮೇ.24:



ಬಿಜೆಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳ ಮೇಲೆ ಮತದಾರರು ವಿಶ್ವಾಸ ಕಳೆದುಕೊಂಡಿದ್ದು, ಈಶಾನ್ಯ ಪದವೀಧರರ ಕ್ಷೇತ್ರದ ಏಳು ಜಿಲ್ಲೆಗಳಲ್ಲಿ ನನಗೆ ಉತ್ತಮ ಸ್ಪಂದನೆ ಸಿಕ್ಕಿದ್ದು ನಾನು ಗೆಲ್ಲುವ ವಿಶ್ವಾಸವಿದೆ ಎಂದು ಪಕ್ಷೇತರ ಅಭ್ಯರ್ಥಿ ನಾರಾ ಪ್ರತಾಪರೆಡ್ಡಿ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪತ್ರಕರ್ತರ ಜೊತೆ ಶುಕ್ರವಾರ ಮಾತನಾಡಿದ ಅವರು, ಬಿಜೆಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವಾಗ ಆಯಾ ಪಕ್ಷಗಳ ಶಾಸಕರು, ಮುಖಂಡರು, ಜನಪ್ರತಿನಿಧಿಗಳು ಅಭ್ಯರ್ಥಿಗಳ ಜೊತೆ ಇರಲಿಲ್ಲ. ಮತದಾರರು ನನಗೆ ಬೆಂಬಲ ನೀಡಿದ್ದು, ಈ ಬಾರಿ ಗೆಲ್ಲುವ ವಿಶ್ವಾಸವಿದೆ ಎಂದರು.

ನಾನು ಈ ಚುನಾವಣೆಯಲ್ಲಿ ಗೆಲುವು ಸಾಧಿಸಿದಲ್ಲಿ ಪದವಿ ಓದುವ ವಿದ್ಯಾರ್ಥಿಗಳಿಗೆ ಕೆ.ಎ.ಎಸ್ ಮತ್ತು ಐ.ಎ.ಎಸ್ ಸೇರಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ತೇರ್ಗಡೆಗೆ ಪೂರಕ ಜ್ಞಾನ ನೀಡುವ ಯೋಜನೆ ಹೊಂದಿರುವೆ. ನನ್ನ ಅನುದಾನ ಶೈಕ್ಷಣಿಕ ರಂಗಕ್ಕೆ ಹೆಚ್ಚಿನ ಪ್ರಮಾಣದಲ್ಲಿ ವಿನಿಯೋಗಿಸುವೆ ಎಂದರು.

ಬಳ್ಳಾರಿ ಜಿಲ್ಲೆಯ ಡಿ.ಎಂ.ಎಫ್ ನಿಧಿ ಶೇ. 20 ರಷ್ಟು ಶಿಕ್ಷಣಕ್ಕೆ ಉಪಯೋಗಿಸಲಾಗುತ್ತದೆ. ಕೊಪ್ಪಳ, ಬಳ್ಳಾರಿ, ವಿಯಜನಗರ ಸೇರಿದಂತೆ ಒಟ್ಟು ಏಳು ಜಿಲ್ಲೆಗಳಲ್ಲಿ 1,56,623 ಮತದಾರರಿದ್ದಾರೆ ಎಂದರು.

## ಕಾಂಬೋಡಿಯಾದಲ್ಲಿ 60 ಮಂದಿ ಭಾರತೀಯರ ರಕ್ಷಣೆ

• **ಸುದ್ದಿಮೂಲ ವಾರ್ತೆ** ಕಾಂಬೋಡಿಯಾ, ಮೇ.24:
ಆಕರ್ಷಕ ವೇತನದ ಉದ್ಯೋಗ ನೀಡುವ ವಂಚನೆಯ ಜಾಲಕ್ಕೆ ಬಿದ್ದು ಕಾಂಬೋಡಿಯಾದಲ್ಲಿ ಒದ್ದಾಡುತ್ತಿದ್ದ ಭಾರತೀಯರನ್ನು ರಕ್ಷಿಸಲಾಗಿದೆ. ಮೋಸದ ಜಾಲದಲ್ಲಿ ಸಿಲುಕಿದ್ದ ಭಾರತೀಯರ ಮೊದಲ ತಂಡವನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರಲಾಗಿದೆ. ಈ ತಂಡದಲ್ಲಿ 60 ಮಂದಿ ಸ್ವದೇಶಕ್ಕೆ ಮರಳಿದ್ದಾರೆ. ಇವರನ್ನು ಮೇ 20ರಂದು ಜಿನ್ಬೆ– 4 ಎಂಬ ಸ್ಥಳದಿಂದ ರಕ್ಷಿಸಲಾಗಿದೆ ಎಂದು ಭಾರತೀಯ ರಾಯಭಾರಿ ಕಚೇರಿ ತಿಳಿಸಿದೆ.

ಭಾರತೀಯ ಉದ್ಯೋಗಿಗಳ ರಕ್ಷಣೆ ಕುರಿತು ಸಾಮಾಜಿಕ ಜಾಲತಾಣದಲ್ಲಿ ತಿಳಿಸಿರುವ ರಾಯಭಾರ ಕಚೇರಿ, 'ವಿದೇಶದಲ್ಲಿ ಸಿಲುಕಿರುವ ಭಾರತೀಯರಿಗೆ ಸಹಾಯ ನೀಡಲು ಯಾವಾಗಲೂ ನಾವು ಬದ್ಧ. ಕಾಂಬೋಡಿಯಾದಲ್ಲಿ ಮೋಸದ ಉದ್ಯೋಗ ಜಾಲಕ್ಕೆ ಸಿಲುಕಿದ 60 ಮಂದಿಯ ರಕ್ಷಿಸಲಾಗಿದೆ. ಕಾರ್ಯಾಚರಣೆಗೆ ಬೆಂಬಲ ನೀಡಿದ ಕಾಂಬೋಡಿಯಾ ಅಧಿಕಾರಿಗಳಿಗೆ ಧನ್ಯವಾದ' ಎಂದು ತಿಳಿಸಿದೆ.

ಕಾಂಬೋಡಿಯಾಗೆ ಉದ್ಯೋಗ ಅರಸಿ ತೆರಳುವವರಿಗೆ ಭಾರತೀಯ ರಾಯಭಾರಿ ಕಚೇರಿ ಇತ್ತೀಚೆಗೆ ಮಹತ್ವದ ಸಲಹೆ ನೀಡಿತ್ತು. ವಿದೇಶಾಂಗ ಇಲಾಖೆಯ ಅನುಮೋದಿತ ಅಧಿಕೃತ ಏಜೆಂಟ್ ಗಳಿಂದ ಉದ್ಯೋಗ ಭದ್ರತೆ ಸಿಕ್ಕಲ್ಲಿ ಮಾತ್ರ ವಿದೇಶಕ್ಕೆ ಹೋಗಬೇಕು. ಪ್ರವಾಸಿ ವೀಸಾದಲ್ಲಿ ಉದ್ಯೋಗ ಪಡೆಯಬಹುದು ಎಂಬ ಆಮಿಷಕ್ಕೆ ಬಲಿಯಾಗಬೇಡಿ ಎಂದು ತಿಳಿಸಿದೆ.

## ಮಾನ್ವಿ : ಲೊಯೋಲಾ ಕಾಲೇಜು ವಿದ್ಯಾರ್ಥಿ ಆಯ್ಕೆ

• **ಸುದ್ದಿಮೂಲ ವಾರ್ತೆ** ಮಾನ್ವಿ, ಮೇ.24:



ಏರ್‌ಕ್ರಾಫ್ಟ್ ಮೆಂಟೆನೆನ್ಸ್ ಇಂಜಿನಿಯರಿಂಗ್ ಡೈರೆಕ್ಟರೇಟ್ ಜನರಲ್ ಆಫ್ ಸಿವಿಲ್ ಏವಿಯೇಷನ್ ನಡೆಸುವ 2024-25ನೇ ಸಾಲಿನ ಪ್ರವೇಶಾತಿ ಪರೀಕ್ಷೆಯಲ್ಲಿ ಮಾನ್ವಿ ನಗರದ ಪ್ರತಿಷ್ಠಿತ ಲೊಯೋಲಾ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಸಂತೋಷ ಇವರು ಆಲ್ ಇಂಡಿಯಾ ರ್‍ಯಾಂಕಿಂಗ್ ನಲ್ಲಿ 438 ನೇಯ ರ್‍ಯಾಂಕ್ ಪಡೆಯುವುದರ ಮೂಲಕ ವಿಮಾನ ನಿರ್ವಹಣಾ ಎಂಜಿನಿಯರ್ ಅಧ್ಯಯನಕ್ಕೆ ಆಯ್ಕೆಯಾಗಿರುತ್ತಾರೆ

ವಿದ್ಯಾರ್ಥಿಯ ಸಾಧನೆಗೆ ಸಂಸ್ಥೆಯ ಮುಖ್ಯಸ್ಥರಾದ ವಂ. ಫಾದರ್ ಲಿಯೋ ಪರೇರಾ, ಪ್ರಾಚಾರ್ಯರಾದ ವಂ. ಫಾದರ್ ಪ್ರವೀಣ್ ಕುಮಾರ ಹಾಗೂ ಬೋಧಕ - ಬೋಧಕೇತರ ವೃಂದದವರು ಅಭಿನಂದಿಸಿದ್ದಾರೆ.

## ಹೊಸಪೇಟೆ : ಡೊನೇಷನ್ ಹಾವಳಿ ತಡೆಗೆ ಆಗ್ರಹ




• **ಸುದ್ದಿಮೂಲ ವಾರ್ತೆ** ಹೊಸಪೇಟೆ, ಮೇ.24:
ಖಾಸಗಿ ಶಾಲೆಗಳಲ್ಲಿ ಡೊನೇಶನ್ ಹಾವಳಿ ತಡೆಗಟ್ಟಬೇಕು ಎಂದು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಹಾಗೂ ಭಾರತ ಪ್ರ ಜಾಸ ತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ತಾಲೂಕು ಸಮಿತಿ ವತಿ ಯಿಂದ ಬಿಇಒ ಶರಣಪ್ಪ ಮಗ್ಗದ್ ಅವರಿಗೆ ಗುರುವಾರ ಮನವಿಪತ್ರ ಸಲ್ಲಿಸಲಾ ಯಿತು.

ಶಾಲಾ ಶುಲ್ಕದ ವಿವರ ನೋಟಿಸ್ ಬೋರ್ಡ್‌ನಲ್ಲಿ ಸಾರ್ವಜನಿಕವಾಗಿ ಹಾಕ ಲು ಆದೇಶವಿದ್ದರೂ ಹಾಕುತ್ತಿಲ್ಲ. ಫೆಬ್ರವರಿ, ಮಾರ್ಚ್ ತಿಂಗಳಲ್ಲಿಯೇ ಶಾಲಾ ಪ್ರವೇಶಾತಿ ಪೂರ್ಣಗೊಳಿಸಲಾಗುತ್ತಿದೆ. ಈಗ ಲೆಕ್ಕಕಭಿಪ್ಟ ಪ್ರವೇಶಾತಿ ಆರಂಭಿಸಿವೆ. ಈ ಎಲ್ಲಾ ವ್ಯವಸ್ಥೆ ಅಧಿಕಾರಿಗಳು, ಜನಪ್ರತಿನಿಧಿಗಳು ನೋಡಿ ನೋಡದಂತೆ ಸುಮ್ಮನಿದ್ದಾರೆ. ಹಾಗಾಗಿ ಶೀಘ್ರದಲ್ಲಿಯೇ ಸಂಘಟನಾ ಪದಾಧಿ ಕಾರಿಗಳ ಒಳಗೊಂಡಂತೆ ಸಭೆ ಕರೆದು ವಂತಿಗೆ ವಿರೋಧಿ ಸಮಿತಿ ರಚಿಸ ಲು ಮುಂದಾಗಬೇಕು ಎಂದು ಆಗ್ರಹಿಸಿದರು.

## ಡೊನೇಷನ್ ತಡೆಗೆ ಎನ್‌ಎಸ್‌ಯುಐ ಪ್ರತಿಭಟನೆ



• **ಸುದ್ದಿಮೂಲ ವಾರ್ತೆ** ಹರಪನಹಳ್ಳಿ, ಮೇ.24:
ಇಂದು ಹರಪನಹಳ್ಳಿ ತಾಲ್ಲೂಕು ಎನ್.ಎಸ್.ಯು.ಐ. ಸಂಘಟನೆ ವತಿಯಿಂದ ಪಟ್ಟಣದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಡೊನೇಷನ್ ಹಾವಳಿ ನಿಯಂತ್ರಿಸಲು ಆಗ್ರಹಿಸಿ ಪ್ರತಿಭಟನೆ ಮಾಡಲಾಯಿತು.

ತಾಲೂಕಿನಾದ್ಯಂತ ಖಾಸಗಿ ಶಿಕ್ಷಣ ಸಂಸ್ಥೆಗಳು ಕಾನೂನು ಉಲ್ಲಂಘಿಸಿ ಶಿಕ್ಷಣ ಇಲಾಖೆಯ ನಿಯಮ ಗಾಳಿಗೆ ತೂರಿ ಮನಸೋಇಚ್ಛೆ ಪೋಷಕರು ಮತ್ತು ವಿದ್ಯಾರ್ಥಿಗಳಿಂದ ಡೊನೇಷನ್ ಅಕ್ರಮವಾಗಿ ವಸೂಲಿ ಮಾಡುತ್ತಿರುವುದನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯು ನೋಡಿಯೂ ಕಣ್ಣು ಮುಚ್ಚಿ ಕುಳಿತಿರುವುದು ಜಾಣ ಕುರುಡುತನ ಪ್ರದರ್ಶನ ಮಾಡುತ್ತಿದೆ.ತಾಲ್ಲೂಕಿನ ಕೆಲ ಖಾಸಗಿ ಶಿಕ್ಷಣ ಸಂಸ್ಥೆಗಳು ವ್ಯಾಪಕವಾಗಿ ಡೊನೇಶನ್ ಪಡೆಯುತ್ತಿವೆ. ಕ್ಷೇತ್ರ ಶಿಕ್ಷಣಾಧಿಕಾರಿಗಳು ಇತ್ತ ಕಡೆ ಗಮನ ಹರಿಸದೆ ನಿರ್ಲಕ್ಷ್ಯವಹಿಸಿದ್ದಾರೆ.ಪಿಯುಸಿ ತರಗತಿ ವಿದ್ಯಾರ್ಥಿಗಳಿಂದ 10 ಸಾವಿರ ರೂ. ನಿಂದ 35ಸಾವಿರ ರೂ. ವರೆಗೆ ಪಾಲಕರ ಬಳಿ ಹಣ ವಸೂಲಿ ಮಾಡುತ್ತಿದ್ದಾರೆ. ಈ ಕ್ರಮವನ್ನು ಎನ್‌ಎಸ್‌ಯುಐ ತಾಲೂಕು ಸಮಿತಿ ತೀವ್ರವಾಗಿ ಖಂಡಿಸಿತು. ನಂತರ ತಾಲೂಕು ಕಚೇರಿಯಲ್ಲಿ ತಹಶೀಲ್ದಾರರನ್ನು ಭೇಟಿಯಾಗಿ ಕ್ರಮ ಕೈಗೊಳ್ಳಲು ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಎನ್‌ಎಸ್‌ಯುಐ ಬಳ್ಳಾರಿ ಮತ್ತು ವಿಜಯನಗರ ಜಿಲ್ಲಾ ಉಪಾಧ್ಯಕ್ಷ ಶ್ರೀಕಾಂತಯಾದವ್, ಬಳ್ಳಾರಿ ಮತ್ತು ವಿಜಯನಗರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಾಸಿಂ ಡೆಂಕಿ, ತಾಲ್ಲೂಕು ಅಧ್ಯಕ್ಷ ಅಬುಸಾಲೇಹ,ವೆಂಕಟೇಶ್ ನಾಯ್ಕ್ ಅಜಾದ,ಯುವ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಾಲಾಜಿ, ತಾಲ್ಲೂಕು ಕಾರ್ಯದರ್ಶಿ ಮುಶ್ರಫ್ ಅಲಿ, ರೇವಣ್ಣ, ಮಂಜು, ಸಮೀರ್, ಮುಂತಾದವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

## ಸಿರವಾರ : 3 ಮತಗಟ್ಟೆ ಸ್ಥಾಪನೆ

• **ಸುದ್ದಿಮೂಲ ವಾರ್ತೆ** ಸಿರವಾರ, ಮೇ.24:
ಈಶಾನ್ಯ ಪದವೀಧರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯ ಜೂ.3ರಂದು ನಡೆಯಲಿದೆ. ಇದಕ್ಕೆ ತಾಲೂಕು ಆಡಳಿತ ಸಕಲ ಸಿದ್ದತೆ ನಡೆಸಿದೆ ಎಂದು ತಹಶಿಲ್ದಾರ ಮಲ್ಲಿಕಾರ್ಜುನ ವಡ್ಡನಕೇರಾ ಪತ್ರಿಕಾ ಪ್ರಕಟಣೆ ಹೊರಡಿಸಿದ್ದಾರೆ.

ತಾಲೂಕಿನಲ್ಲಿ ಒಟ್ಟು ಮೂರು ಮತದಾನ ಕೇಂದ್ರಗಳಿದ್ದು ಸಿರವಾರ ಪಟ್ಟಣ ಪಂಚಾಯತಿ ಕಾರ್ಯಾಲಯದ ಹೊಸ ಕಟ್ಟಡದಲ್ಲಿ ಮತದಾರರ ಸಂಖ್ಯೆ 811 ಇದರಲ್ಲಿ ಗಂಡು 559, ಹೆಣ್ಣು 252, ಕವಿತಾಳ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಪೂರ್ವ ಭಾಗದಲ್ಲಿ ಒಟ್ಟು ಮತದಾರರ ಸಂಖ್ಯೆ 288, ಗಂಡು 200, ಹೆಣ್ಣು 88, ಕಲ್ಲೂರು ಗ್ರಾಮದಲ್ಲಿ ಗ್ರಾಮ ಪಂಚಾಯತಿ ಕಾರ್ಯಾಲಯದಲ್ಲಿ ಒಟ್ಟು ಮತದಾರರ ಸಂಖ್ಯೆ 225, ಗಂಡು 170 ಹೆಣ್ಣು 55 ಇದ್ದು ಬೆಳಿಗ್ಗೆ 8:ರಿಂದ ಮತದಾನ ಆರಂಭ ಸಂಜೆ 4ಕ್ಕೆ ಮುಕ್ತಾಯ ವಾಗಲಿದೆ ಎಂದು ತಿಳಿಸಿದ್ದಾರೆ.

## ಇಂದು ಇಡಪನೂರಿನಲ್ಲಿ ಉರ್ಸ್ ಎ ಶರೀಫ್ ಆಚರಣೆ

• **ಸುದ್ದಿಮೂಲ ವಾರ್ತೆ** ರಾಯಚೂರು, ಮೇ.24:
ರಾಯಚೂರು ತಾಲೂಕಿನ ಇಡಪನೂರು ಗ್ರಾಮದ ಹಜರತ್ ಖ್ವಾಜ ಗೋಕರ್ ಗರೀಬ್ ಬಂದಾನವಾಜ್(ಸುನ್ನಿ) ಉರ್ಸ್ ಶರೀಫ್ ಆಚರಿಸಲು ನಿರ್ಣಯಿಸಲಾಗಿದ್ದು, ಮೇ.25ರಂದು ಸಂದಲ್ ಶರೀಫ್, ಮೇ.26ರಂದು ಉರ್ಸ್ ಎ ಶರೀಫ್ ಹಾಗೂ ಮೇ.27ರಂದು ಜಯಾರತ್ ಶರೀಫ್ ಆಚರಣೆ ಜರುಗಲಿದೆ ಎಂದು ಜಿಲ್ಲಾ ವಕ್ಫ್ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿವಿಧ ವಸತಿ ನಿಲಯಕ್ಕೆ ಅರ್ಜಿ ಆಹ್ವಾನ

• **ಸುದ್ದಿಮೂಲ ವಾರ್ತೆ** ರಾಯಚೂರು, ಮೇ.24:
ರಾಯಚೂರು ತಾಲೂಕಿನಲ್ಲಿ 2 ಮೆಟ್ರಿಕ್ ಪೂರ್ವ, 5 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹಾಗೂ 1 ವಾಲ್ಮೀಕಿ ಆಶ್ರಮ ಶಾಲೆಗಳು ಸೇರಿ ವಿದ್ಯಾರ್ಥಿಗಳಿಗೆ 2024-25 ನೇ ಸಾಲಿಗೆ ಪ್ರವೇಶ ಕಲ್ಪಿಸುತ್ತಿದ್ದು ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ SHP/ HMIS Portal ಮುಖಾಂತರ Online ನಲ್ಲಿ ತಾಲೂಕವಾರು ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಹಗಾಗಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ರಾಯಚೂರು ಅಥವಾ ತಾಲೂಕ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಛೇರಿ ರಾಯಚೂರು ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ತಾಲೂಕ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


## SHILPA MEDICARE LIMITED.

Shilpa — Innovating for affordable healthcare

Registered office # 12-6-214/A-1, Hyderabad Road, Raichur-584135
Website - www.vbshilpa.com, Email - info@vbshilpa.com. ,Telephone -+91-8532-238704
CIN No. - L85110KA1987PLC008739

**Extract of the Standalone and Consolidated audited Financial Results for the Quarter and Year Ended 31.03.2024**

| Sl. No. | Particulars | STANDALONE | | | | | CONSOLIDATED | | | | |
|---|---|---|---|---|---|---|---|---|---|---|---|
| | | Quarter ended 31-03-2024 (AUDITED) | Quarter ended 31.12.2023 (UNAUDITED) | Quarter ended 31.03.2023 (AUDITED) | Year ended 31-3-2024 (AUDITED) | Previous Year ended 31-3-2023 (AUDITED) | Quarter ended 31-03-2024 (AUDITED) | Quarter ended 30.12.2023 (UNAUDITED) | Quarter ended 31-03-2023 (AUDITED) | Year ended 31-03-2024 (AUDITED) | Previous Year ended 31.03.2023 (AUDITED) |
| 1 | Total Income from Operations | 8,745.17 | 6,397.93 | 6,649.51 | 30,978.67 | 24,770.20 | 29,169.25 | 28,675.90 | 26,356.15 | 115,160.30 | 105,011.24 |
| 2 | Net Profit before tax, non controlling interest & share in profit /(loss) of joint venture / associates (before exceptional items) | 1,520.90 | 402.59 | (1,202.63) | 4,854.01 | (4,272.95) | 2158.3 | 1416.51 | (423.75) | 4821 | (3,827.95) |
| 3 | Net Profit before tax , non controlling interest & share in profit /(loss)of joint venture/associates (after exceptional items) | 1,142.55 | 390.76 | (2,698.75) | 3,808.91 | (5,827.60) | 2,771.37 | 1,416.51 | (423.75) | 5,434.07 | (3,827.95) |
| 4 | Net Profit after tax , non controlling interest & share in profit /(loss)of joint venture / associates (after exceptional items) | 973.78 | 269.70 | (2,892.49) | 2,693.74 | 5,719.30 | 2,450.29 | 458.06 | (804.21) | 3,187.42 | (3,253.34) |
| 5 | **Total Income (including other comprehensive income /(loss))** | **808.15** | **269.70** | **(2,608.86)** | **2,528.11** | **6,147.90** | **2,210.06** | **459.12** | **(630.06)** | **2,950.36** | **(2,924.99)** |
| 6 | Equity Share Capital | 868.02 | 868.02 | 868.02 | 868.02 | 868.02 | 868.02 | 868.02 | 868.02 | 868.02 | 868.02 |
| 7 | Reserves (excluding Revaluation Reserve) as shown in the Audited Balance Sheet i.e Other Equity | - | - | - | - | - | - | - | - | - | - |
| 8 | Earnings Per Share (of Rs. 1/- each)(for continuing operations) -(in Rs) | (Not annualised) | (annualised) | (Not annualised) | (annualised) | (annualised) | (Not annualised) | (Not annualised) | (Not annualised) | (Not annualised) | (Annualised) |
| | 1) Basic: | 1.12 | 0.31 | (3.33) | 3.10 | 6.59 | 2.82 | 0.53 | (0.93) | 3.67 | (3.75) |
| | 2) Diluted: | 1.12 | 0.31 | (3.33) | 3.10 | 6.59 | 2.82 | 0.53 | (0.93) | 3.67 | (3.75) |

**Notes:**

1 The above is an extract of the detailed format of audited financial results filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The full format of the audited financial results are available on the Investor section of our website www.vbshilpa.com and under corporate section of BSE Limited and National Stock Exchange of India Limited.

2 The above results have been reviewed by the Audit Committee and approved by the Board of Directors at its meeting held on 23 May, 2024

**For and on behalf of the Board of Directors**
Shilpa Medicare Limited
Sd/-
Omprakash Inani
**Chairman**

Date: 23/05/2024
Place Mumbai